“ಇಲ್ಲಾ, ಇಲ್ಲಾ, ಅವನು ನಿಮ್ಮನ್ನು ಬೂಂದಿಯದಿಂದ ಇರಿದು ಕೊಲ್ಲುವುದಿಲ್ಲ. ಬದಲಾಗಿ ಗೂವೀರಾ (ಮಂತ್ರದಂಡ) ಬಳಸಿ ಕೊಲ್ಲುತ್ತಾನೆ. ಅದೊಂದು ವಿಷದಲ್ಲಿ ಅದ್ದಿದ ಕೋಲು. ಅದು ನಿಮ್ಮನ್ನು ಒಮ್ಮೆಗೇ ಸಾಯಿಸುವುದಿಲ್ಲ. ನಿಮ್ಮ ನರಗಳು ನಾಶವಾಗುವ ವರೆಗೂ ನೀವು ನೋವಿನಲ್ಲಿ ನರಳುತ್ತೀರಿ. ಹಿಂತಿರುಗುವ ಮಾತೇಕೆ? ನಾವು ಬಿಟ್ಟುಬಂದ ಬಯಲಿಗೆ ಬೆಂಕಿ ಹಚ್ಚಿಲ್ಲವೇ? ಅದನ್ನು ಈಗ ಹೇಗೆ ದಾಟುತ್ತೀರಿ? ಮಾತನಾಡಿ ಸುಸ್ತಾಗಬೇಡಿ. ನನ್ನ ಹಿಂದೆ ಬನ್ನಿ. ನೋಡಿ, ಅಲ್ಲಿದೆ ನೀರು.’’

ಬುಲ್ಯೆ ಬುಲ್ಯೆಗಳಿಗೆ ಈಗ ವೀಡಾನ ಮಾತಿನಲ್ಲಿ ಯಾವ ವಿಶ್ವಾಸವೂ ಇರಲಿಲ್ಲ. ಅವನು, “ನೋಡಿ ನೀರು ಕಾಣುತ್ತಿದೆ, ಅಲ್ಲಿ ನೋಡಿ” ಎಂದು ಅರಚುತ್ತಿದ್ದರೂ, ಇವರಿಬ್ಬರು ಕತ್ತೆತ್ತಿಯೂ ನೋಡಲಿಲ್ಲ. ಮತ್ತೆ ಮತ್ತೆ ನಿರಾಶೆ ಅವರಿಗೆ.

ಕೊನೆಗೆ, ಸೋದರಿಯರಿಗೆ ಅವನ ಮೇಲೆ ಎಲ್ಲಿಲ್ಲದ ಕೋಪ ಬಂದು ಅವನನ್ನು ಹಿಡಿದು ಚೆನ್ನಾಗಿ ಹೊಡೆದರು. ಅವರು ಹೊಡೆಯುತ್ತಿದ್ದಾಗಲೂ ಅವನು, “ನೋಡಿ, ಅಲ್ಲಿ ನೋಡಿ. ನೀರು ಕಾಣುತ್ತಿದೆ” ಎಂದು ಗೋಳಾಡಿದ. ಅವರ ಹೊಡೆತವನ್ನು ತಾಳಲಾರದೆ ಅವನು ಅಂಗಲಾಚಿದ,

“ನನ್ನನ್ನು ಬಿಟ್ಟುಬಿಡಿ. ಅಲ್ಲಿ ಕಾಣುವ ಜಲವೃಕ್ಷಗಳ ಬೇರನ್ನು ಹೊರತೆಗೆದು, ಹಿಂಡಿ ನಿಮಗೆ ನೀರನ್ನು ಕುಡಿಸುತ್ತೇನೆ.” ಆಗಲೂ ಬುಲ್ಯೆ ಬುಲ್ಯೆ ಅವನ್ನನ್ನು ಹೊಡೆಯುವುದನ್ನು ನಿಲ್ಲಿಸಲಿಲ್ಲ.

“ನೋಡಿ, ಅಲ್ಲೊಂದು ಕೂಲಾಬಾ (ಬೇರಿನಲ್ಲಿ ನೀರನ್ನು ಸಂಗ್ರಹಿಸುಡುವ ಮರ) ಕಾಣುತ್ತಿದೆ. ಅದರ ಬೇರಿನಿಂದ ಸಾಕಷ್ಟು ನೀರನ್ನು ತೆಗೆಯಬಲ್ಲೆ. ಅಥವಾ ಇಲ್ಲಿಯೇ ಪಕ್ಕದಲ್ಲಿ ಬಿಂಗಾವಿಂಗುಲ್ (ಹೂಬಿಡುವ ಚಿಕ್ಕ ಪೊದೆ. ಇದರ ಬೇರಿನಿಂದ ನೀರನ್ನು ಹೀರಬಹುದು) ಗಿಡವಿದೆ, ಅದರ ಬೇರೆಲ್ಲಾ ಬರಿ ನೀರೇ. ಅವುಗಳಿಂದಲೂ ನೀರನ್ನು ತೆಗೆಯುತ್ತೇನೆ.” ಎಂದು ಮತ್ತೆ ಮತ್ತೆ ಬೇಡಿದ.

ಆದರೆ, ಇವನ ಆಶ್ವಾಸನೆಗಳಲ್ಲಿ ಬುಲ್ಯೆ ಬುಲ್ಯೆಗೆ ನಂಬಿಕೆ ಇಲ್ಲವಾಗಿತ್ತು. ಅವರಿಬ್ಬರಿಗೂ ಸುಸ್ತಾಗುವ ವರೆಗೂ ಅವನನ್ನು ಹೊಡೆದರು. ಹೊಡೆತ ನಿಂತಾಗ ವೀಡಾ ತುಸು ದೂರ ಹೋಗಿ ಮಲಗಿದ. ಅವನ ಮೈಯೆಲ್ಲಾ ಗಾಯ. “ಸದ್ಯ, ಕತ್ತಲಾಯಿತು. ಸೂರ್ಯನ ತಾಪ ನಿಂತಿದೆ” ಎಂದು ಸಮಾಧಾನಗೊಂಡ.

ಇತ್ತ ಓರ್ವ ಬುಲ್ಯೆ ಮತ್ತೊಬ್ಬಳಿಗೆ ಹೇಳಿದಳು, “ನಮ್ಮ ಬಾರ್ಗಿ (ಅಜ್ಜಿ) ಹಾಡುತ್ತಿದ್ದ ಹಾಡನ್ನು ನಾವೇಕೆ ಹಾಡಬಾರದು? ಅದರಿಂದ ಮಳೆ ಬರುತ್ತದೆ ಅಲ್ಲವೇ?”

“ನಮ್ಮ ಒಣಗಂಟಲಲ್ಲೇ ಹಾಡಿ ನೋಡೋಣವೆ?” ಎಂದು ಮತ್ತೊಬ್ಬಳು ಹೇಳಿದಳು.

“ನಮ್ಮ ಸೋದರ ಸಂಬಂಧಿ, ಗುಡುಗು ಡೂಲೂಮ್ಯೆ (ಗುಡುಗು) ಅವನನ್ನು ಕುರಿತು ಹಾಡೋಣ. ಅವನು ನಮ್ಮ ಹಾಡನ್ನು ಕೇಳಿಸಿಕೊಂಡು, ನಮಗಾಗಿ ಮೋಡವೊಂದನ್ನು ಒಡೆದು ಮಳೆ ಸುರಿಸುತ್ತಾನೆ.’’

ಇಬ್ಬರೂ ಕುಳಿತು ತಮ್ಮ ದೇಹಗಳನ್ನು ಹಿಂದಿನಿಂದ ಮುಂದಕ್ಕೆ ತೂಗುತ್ತಾ, ತಮ್ಮ ಮಂಡಿಗಳನ್ನು ತಟ್ಟಿಕೊಂಡು ಪ್ರಾರಂಭಿಸಿದರು.

“ಮೂಗಾರಿ, ಮೂಗಾರೇ, ಮೇ, ಮೇ, ಈಹು ಈಹು, ಡೂಂಗ್ಯೆರಾ.”

ಮತ್ತೆ ಮತ್ತೆ ಈ ಸಾಲುಗಳನ್ನೇ ಅವರ ಅಜ್ಜಿ ಅಥವಾ ಬಾರ್ಗಿ ಹಾಡಿದಂತೆಯೇ ಹಾಡಿದರು.

ಸಾಲದೆಂಬಂತೆ, ತಮ್ಮದೇ ಸಾಲುಗಳನ್ನೂ ಸೇರಿಸಿದರು.

“ಈಹು ಊನಾ ವಾಂಬಾನೀ ಡೂಲುಮ್ಯೆ
ಬುಲ್ಲುಳ್ ಗೂನುಂಗ್ ಇಂದೆರ್ ಗಿಂಗ್ನೀ
ಈಹು ಊನಾ ವಾಂಬಾನೀ ಡೂಲುಮ್ಯೆ”